1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ

ಸಿಸಿ ನಂಃ1291/2015

ಪಿಡಬ್ಲೂಃ 5 ಸಿಡಬ್ಲೂಃ 10

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಬಿ ರಾಜು |
| ತಂದೆಯ ಹೆಸರು | ಃ | ಲೇಟ್ ದೊಳ್ಳೆಗೌಡ |
| ವಯಸ್ಸು | ಃ | 53 ವರ್ಷ |
| ಉದ್ಯೋಗ | ಃ | ಎ ಎಸ್ ಐ ಕೆಸ್ತೂರು ಪೊಲೀಸ್ ಠಾಣೆ |
| ವಾಸ | ಃ | ಮದ್ದೂರು |

ಸಾಕ್ಷಿಯನ್ನು ದಿನಾಂಕಃ-28.11.2024 ರಂದು ಪ್ರಮಾಣ ಮಾಡಿಸಲಾಯಿತು
ಮುಖ್ಯ ವಿಚಾರಣೆಃ- ಶ್ರೀ ಸ.ಸ.ಅ. ರವರಿಂದ.

1. ನಾನು 2013 ರಿಂದ 2021 ರವರೆಗೆ ಮಳವಳ್ಳಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ದಿಃ 5.9.2015 ರಂದು ನಾನು ಮತ್ತು ಚಾಸ 9 , 10 , 11 ರಂದ 13 ರವರನ್ನು ಕರೆದುಕೊಂಡು ಬೆಳಗಿನ ಜಾವ ಸುಮಾರು 4 ಗಂಟೆ ಸಮಯದಲ್ಲಿ ಕ್ಯಾತೆಗೌಡ ಗೇಟಿನ ಬಳಿ ವಾಹನವನ್ನು ನಿಲ್ಲಿಸಿಕೊಂಡು ನಿಂತಿದ್ದಾಗ ಒಂದು ಬಜಾಜ್ ಸ್ಕೂಟರಲ್ಲಿ 3 ಜನ ಆಸಾಮಿಗಳು ಮಳವಳ್ಳಿ ಕಡೆಗೆ ಬರುತ್ತಿದ್ದು ನಮ್ಮನ್ನು ನೋಡಿ ವಾಪಾಸು ಹಿಂದಿರುಗಿಸಿಕೊಂಡು ಹೋಗುತ್ತಿದ್ದ ಮೇರೆಗೆ ಅನುಮಾನ ಬಂದು ಪೊಲಿಸ್ ವಾಹನದಲ್ಲಿ ಹಿಡಿದುಕೊಂಡು 3 ಜನರು ಮತ್ತು ಸ್ಕೂಟರನ್ನು ಠಾಣೆಗೆ ಕರೆದುಕೊಂಡು ಬಂದು ಚಾಸ 16 ರವರು ಕೂಲಂಕುಷವಾಗಿ ವಿಚಾರ ಮಾಡಿ ಸ್ವಇಚ್ಛ ಹೇಳಿಕೆಯನ್ನು ಪಡೆದುಕೊಂಡು ಆರೋಪಿಗಳು ಸುಮಾರು 1 ವರ್ಷದ ಹಿಂದಿನಿಂದ 6-7 ಬಾರಿ ನಾವು ಸೇರಿ ಇದೇ ವಾಹನದಿಂದ ಕೆಎ 02 ಇಎ 6942 ಬೈಕಿನಲ್ಲಿ ಮಳವಳ್ಳಿ ಕಡೆಗಾದಂತೆ ಬಂದು

ನೆಲಮಾಕನಹಳ್ಳಿಯಲ್ಲಿ ಒಂದು ಮನೆ ತರ ಇರುವ ದೇವಸ್ಥಾನದಲ್ಲಿ ಮಳವಳ್ಳಿ ಟೌನು ಅಮೃತೇಶ್ವರನ ಹಳ್ಳಿ ಒಂದು ಮನೆಯಲ್ಲಿ ಕಲ್ಲುವೀರನಹಳ್ಳಿಯ ಒಂದು ಮನೆಯಲ್ಲಿ ರಾತ್ರಿ ಮತ್ತು ಹಗಲು ವೇಳೆ ಬೀಗ ಹಾಕಿರುವುದನ್ನು ಗುರುತಿಸಿ ಕಬ್ಬಿಣದ ರಾಡಿಂದ ಬಾಗಿಲು ಹೊಡೆದು ಟ್ರಂಕು ಮತ್ತು ಬೀರುನಲ್ಲಿ ಇಟ್ಟಿರುವ ಒಡವೆ , ಬೆಳ್ಳಿಗಳನ್ನು ಕಳ್ಳತನ ಮಾಡಿಕೊಂಡು ಹೋಗಿ ಸಮವಾಗಿ ಖರ್ಚು ಮಾಡಿಕೊಂಡು ಕೆಲವು ಒಡವೆ ಒಡವೆ ಮತ್ತು ಟಿ ವಿ ಯನ್ನು ಮಾರಲು ಅವಕಾಶ ಸಿಗದ ಕಾರಣ ಮಾರಾಟ ಮಾಡುವವರಿಗೆ ಸಲೀಂ ಮನೆಯಲ್ಲಿ ಇಟ್ಟಿಕೊಂಡಿರುತ್ತೇವೆ. ಅವುಗಳನ್ನು ನಮ್ಮ ಜೊತೆ ಬಂದರೆ ನಾವು ತೋರಿಸುತೇವೆ ಎಂದು ಹೇಳಿಕೆ ನೀಡಿದ್ದು ಚಸ 16 ರವರು ಆರೋಪಿ ವಿರುದ್ದ ಕ್ರಮ ಜರುಗಿಸಿ ಇಬ್ಬರುಪಂಚರನ್ನು ಠಾಣೆಗೆ ಕರೆಸಿಕೊಂಡು ಸ್ಕೂಟರು ಮತ್ತು ಕಬ್ಬಿಣದ ರಾಡನ್ನು ಮಹಜರು ಮುಖಾಂತರ ಅಮಾನತುಪಡಿಸಿಕೊಂಡು ನಂತರ ಸಿಬ್ಬಂದಿಗಳನ್ನು ಕರೆದುಕೊಂಡು ಒಡವೆಗಳನ್ನು ಪಂಚರು ಮತ್ತು ಅಕ್ಕಸಾಲಿಗರನ್ನು ಕರೆದುಕೊಂಡು ಪೊಲೀಸು ವಾಹನದಲ್ಲಿ 9.30 ಗಂಟೆಗೆ ಠಾಣೆಯನ್ನು ಬಿಟ್ಟು ಬೆಂಗಳೂರಿಗೆ ಹೋಗಿರುತ್ತಾರೆ. ನಂತರ ಆರೋಪಿಗಳಿಂದ ಚಿನ್ನದ ಒಡವೆಗಳು , ನಗದು 5 ಸಾವಿರವನ್ನು ಸಂಜೆ 6.30 ಗಂಟೆಗೆ ಬೆಂಗಳೂರಿಂದ ವಾಪಾಸು ಠಾಣೆಗೆ ಬಂದು ಠಾಣೆಯಲ್ಲಿ ಚಾಸ 16 ರವರು ನಮ್ಮಗಳ ಹೇಳಿಕೆ ಪಡೆದುಕೊಂಡಿರುತ್ತಾರೆ. ನಂತರ ಆರೋಪಿಗಳ ವಿರುದ್ದ ಮುಂದಿನ ಕ್ರಮ ಜರುಗಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ.

**ಪಾಟೀಸವಾಲುಃ- ಆರೋಪಿ ಪರ** ಶ್ರೀ ಹೆಚ್ ಸಿ ಎಸ್ **ವಕೀಲರಿಂದಃ-**

3. 5.9.2015 ರಂದು ಕಂದೆಗಾಲ ರಸ್ತೆಯನ್ನು ಗಸ್ತುಮಾಡಿಕೊಂಡು ಕ್ಯಾತೆಗೌಡನ ಗೇಟ ಬಳಿ ಇಲಾಖ ವಾಹನದಲ್ಲಿ ನಿಂತುಕೊಂಡಿರುತ್ತೇವೆ. ಕ್ಯಾತೆಗೌಡನದೊಡ್ಡಿ ಎನ್ ಹೆಚ್ ರಸ್ತೆ ಆಗಿರುವುದರಿಂದ ತುಂಬಾ ವಾಹನಗಳು ಓಡಾಡುತ್ತವೆ

ಎಂದರೆ ಸರಿ. ಬಜಾಜ್ ಗಾಡಿ ಆ ದಿನ ಯಾರು ಓಡಿಸುತ್ತಿದ್ದರು ನನಗೆ ನಿಖರವಾಗಿ ಹೇಳಲಾಗುವುದಿಲ್ಲ. ಸದರಿ ಮೋಟಾರು ಸೈಕಲ್ ಬೆಂಗಳೂರು ಕಡೆಯಿಂದ ಮಳವಳ್ಳಿಗೆ ಬರುತ್ತಿದ್ದು ನಮ್ಮ ಇಲಾಖೆ ವಾಹನ ನೋಡಿ ವಾಪಾಸು ತಿರುಗಿಸಿಕೊಂಡಿರುತ್ತಾರೆ. ಆರೋಪಿ ವಾಹನ ಹಿಂತಿರುಗಿಸಿಕೊಂಡು ಹೋಗುತ್ತಿರುವಾಗ ಅರ್ಧ ಕಿ.ಮೀ ದೂರ ಹೋಗಿರುತ್ತೇವೆ. ನಾವು ಆರೋಪಿಯನ್ನು ವಶಪಡಿಸಿಕೊಂಡಾಗ ಆರೋಪಿಯ ದಾಖಲಾತಿ ಡಿ ಎಲ್ ಅನ್ನು ಪರಿಶೀಲಿಸಿರುವುದಿಲ್ಲ. ಆರೋಪಿ ಸಲಿಂ ಬೇಗ್ ಎಂದು ಪ್ರತ್ಯೇಕವಾಗಿ ಹೇಳಲು ಆ ರಾತ್ರಿ **4.30** ಕ್ಕೆ ನಾವು ಯಾವುದೆ ದಾಖಲೆಯನ ್ನು ಪರಿಶೀಲನೆ ಮಾಡಿಲ್ಲ. ಚಾಸ **16** ಸದರಿ ದಿನದಂದು ಆರೋಪಿ ಸಲಿಂ ಬೇಗ್ ಎಂದು ಹೇಳಲು ಯಾವುದೆ ದಾಖಲೆ ಪರಿಶೀಲನೆ ಮಾಡಿರುವುದಿಲ್ಲ. ನಾನು ಆರೋಪಿಯನ್ನು ದಿಃ **6.9.2015** ರಂದು ಬೆಳಗ್ಗೆ **4.30** ಕ್ಕೆ ಕರೆದುಕೊಂಡು ಬಂದಿರುತ್ತೇನೆ. ಈ ಪ್ರಕರಣ ದಾಖಲಾಗುವ ಮುನ್ನ ಸಲಿಂ ಬೇಗ್ ಮತ್ತು ಇತರೆ ಆರೋಪಿಗಳ ಮೇಲೆ **4-5** ಎಫ್ ಐ ಆರ್ ರಿಜಿಸ್ಟರ್ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಎಲ್ಲ ಪ್ರಕರಣಗಳು ಕಳ್ಳತನದ ಕೇಸಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸ್ವಇಚ್ಛಾ ಹೇಳಿಕೆಯನ್ನು ನಾನು ಮತ್ತು ಚಾಸ **16** ರವರು ಮಾಡಿರುತ್ತೇವೆ. ಸ್ವಇಚ್ಛಾ ಹೇಳಿಕೆಯನ್ನು **9.30** ರ ತನಕ ಮಾಡಿರುತ್ತೇವೆ. ಆರೋಪಿ ಸ್ವಇಚ್ಛಾ ಹೇಳಿಕೆ ನೀಡಿರುವುದಿಲ್ಲ ನಾವು ತೊಂದರೆಕೊಟ್ಟು ಸ್ವಇಚ್ಛೆ ಹೇಳಿಕೆ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಲಿಂ ಬೇಗ್ ಘಟನೆ ಸ್ಥಳದಲ್ಲಿ ಇರಲಿಲ್ಲ ಮತ್ತು ವಾಹನ ಚಾಲನೆ ಮಾಡಿಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಸ್ವಇಚ್ಛಾ ಹೇಳಿಕೆ ಮೇರೆಗೆ ಟಿವಿ ಮತ್ತು ಇತರೆ ಬಂಗಾರದ ಒಡವೆಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**4.** ಬೆಳ್ಳಿ ವಸ್ತು ಎಂದು ಹೇಳಲು ನಿಖರವಾಗಿ ನನಗೆ ಹೇಳಲಾಗುವುದಿಲ್ಲ. ಸಾಕ್ಷಿ ಮುಂದುವರೆದು ಬೆಳ್ಳಿ ಚೈನು ದೇವಸ್ಥಾನದ ಛತ್ರಿ ಇರುತ್ತದೆ ಎಂದು

ಹೇಳುತ್ತಾರೆ. ಮತ್ತು ಬೆಳ್ಳಿ ಎಷ್ಟು ಕೆ . ಜಿ ಇರುತ್ತದೆ ನನಗೆ ನಿಖರವಾಗಿ ಹೇಳಲಾಗುವುದಿಲ್ಲ. ಆರೋಪಿ ತಪ್ಪು ಮಾಡಿರುವುದಿಲ್ಲ ಹಿಂದಿನ ಎಫ್ ಐ ಆರ ಪೂರಕವಾಗಿ ಆರೋಪಿ ಮೇಲೆ ಸುಳ್ಳು ಪ್ರಕರಣ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಯಾವುದೆ ಸ್ವಇಚ್ಛ ಹೇಳಿಕೆ ದಾಖಲಿಸಿಲ್ಲ ಎಂದರೆ ಸರಿಯಲ್ಲ. ಮೇಲಧಿಕಾರಿಗಳ ಹೇಳಿಕೆಗೆ ಪೂರಕವಾಗಿ ಸ್ವಇಚ್ಛ ಹೇಳಿಕೆ ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಿಂದ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.

1 ನೇ ಅಪರ ಸಿ.ಜೆ. ಮತ್ತು ಜೆಎಂಎಫ್.ಸಿ
ಮಳವಳ್ಳಿ